# ವಿದೇಶಿ ದೇಣಿಗೆ ನಿಯಂತ್ರಣ (ತಿದ್ದುಪಡಿ) ಮಸೂದೆ, 2026



### ಇತ್ತೀಚೆಗೆ ಸುದ್ದಿಯಲ್ಲಿದೆ:

ಇತ್ತೀಚೆಗೆ, ಕೇಂದ್ರ ಸರ್ಕಾರವು ವಿದೇಶಿ ದೇಣಿಗೆ ನಿಯಂತ್ರಣ (FCRA) ತಿದ್ದುಪಡಿ ಮಸೂದೆ, 2026 ಕುರಿತು ಚರ್ಚೆಯನ್ನು ಮುಂದೂಡಿದ್ದು, ವಿಶೇಷವಾಗಿ ಕೇರಳ ವಿಧಾನಸಭಾ ಚುನಾವಣೆಗೆ ಮುನ್ನ ರಾಜಕೀಯ ವಿವಾದಕ್ಕೆ ಕಾರಣವಾಗಿದೆ.

## ವಿದೇಶಿ ದೇಣಿಗೆ (ನಿಯಂತ್ರಣ) ಕಾಯ್ದೆ (FCRA)ಯ ಬಗ್ಗೆ:

**ಧ್ಯೇಯೋದ್ದೇಶ :** ಇದು ಭಾರತದಲ್ಲಿನ **ವ್ಯಕ್ತಿಗಳು, ಸರ್ಕಾರೇತರ ಸಂಸ್ಥೆಗಳು (NGOs) ಮತ್ತು ಸಂಘ-ಸಂಸ್ಥೆಗಳು** ವಿದೇಶಿ ನಿಧಿಗಳನ್ನು ಸ್ವೀಕರಿಸುವುದನ್ನು ಮತ್ತು ಬಳಸಿಕೊಳ್ಳುವುದನ್ನು ನಿಯಂತ್ರಿಸುವ ಪ್ರಮುಖ ಕಾನೂನಾಗಿದೆ. ಇದನ್ನು ಕೇಂದ್ರ ಗೃಹ ಸಚಿವಾಲಯವು (MoHA) ನಿರ್ವಹಿಸುತ್ತದೆ.

**ಪ್ರಾಮುಖ್ಯತೆ:** ವಿದೇಶಿ ದೇಣಿಗೆಗಳು ರಾಷ್ಟ್ರೀಯ ಹಿತಾಸಕ್ತಿ, ಸಾರ್ವಭೌಮತೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರದಂತೆ ನೋಡಿಕೊಳ್ಳುವುದು.

## FCRA (ತಿದ್ದುಪಡಿ) ಮಸೂದೆ, 2026 ರ ಪ್ರಮುಖ ನಿಬಂಧನೆಗಳು:

### 01 ವಿದೇಶಿ ನಿಧಿಗಳು ಮತ್ತು ಆಸ್ತಿಗಳನ್ನು ವಶಪಡಿಸಿಕೊಳ್ಳಲು ಹೊಸ ನಿಯೋಜಿತ ಪ್ರಾಧಿಕಾರ

NGO ಒಂದರ ನೋಂದಣಿಯನ್ನು ರದ್ದುಗೊಳಿಸಿದರೆ, ಒಪ್ಪಿಸಿದರೆ ಅಥವಾ ನೋಂದಣಿ ಅವಧಿ ಮುಗಿದು ನವೀಕರಣಗೊಳ್ಳದಿದ್ದರೆ, ಈ ಪ್ರಾಧಿಕಾರವು ಮಧ್ಯಪ್ರವೇಶಿಸಿ ಅದರ ಎಲ್ಲಾ ವಿದೇಶಿ ನಿಧಿಗಳು ಮತ್ತು ಆಸ್ತಿಗಳನ್ನು (ವಿದೇಶಿ ಹಣದಿಂದ ಖರೀದಿಸಿದ ಕಟ್ಟಡಗಳು ಅಥವಾ ಉಪಕರಣಗಳು) ತನ್ನ ವಶಕ್ಕೆ ತೆಗೆದುಕೊಳ್ಳಬಹುದು.

**ಶಾಶ್ವತ ಸ್ವಾಧೀನ:- ನಿರ್ದಿಷ್ಟ ಕಾಲಮಿತಿಯೊಳಗೆ ನೋಂದಣಿಯನ್ನು ಮರುಸ್ಥಾಪಿಸದಿದ್ದರೆ,** ಸರ್ಕಾರವು ಈ ಆಸ್ತಿಗಳನ್ನು ಶಾಶ್ವತವಾಗಿ ಮುಟ್ಟುಗೋಲು ಹಾಕಿಕೊಳ್ಳಬಹುದು, ಮಾರಾಟ ಮಾಡಬಹುದು ಅಥವಾ ಇತರ ಸರ್ಕಾರಿ ಇಲಾಖೆಗಳಿಗೆ ವರ್ಗಾಯಿಸಬಹುದು.

### 02 ಪ್ರಮುಖ ಪದಾಧಿಕಾರಿಗಳ ವೈಯಕ್ತಿಕ ಹೊಣೆಗಾರಿಕೆ

ಈ ಮಸೂದೆಯು "**ಪ್ರಮುಖ ಪದಾಧಿಕಾರಿ**" ಎಂಬ ವ್ಯಾಖ್ಯಾನವನ್ನು ವಿಸ್ತರಿಸಿದ್ದು, ಇದು ನಿರ್ದೇಶಕರು, ಪಾಲುದಾರರು, ಟ್ರಸ್ಟಿಗಳು ಮತ್ತು ನಿರ್ವಹಣಾ ಹಂತದಲ್ಲಿರುವ ಪ್ರತಿಯೊಬ್ಬರನ್ನು ಒಳಗೊಳ್ಳುತ್ತದೆ.

### 03 ನೋಂದಣಿಯ ಸ್ವಯಂಚಾಲಿತ ಮುಕ್ತಾಯ

**ಕಾರ್ಯವಿಧಾನ:-** FCRA ನೋಂದಣಿಯ ಅವಧಿ ಮುಗಿದು ನವೀಕರಣಗೊಳ್ಳದಿದ್ದರೆ ಅಥವಾ ನವೀಕರಣ ಕೋರಿಕೆಯನ್ನು ತಿರಸ್ಕರಿಸಿದರೆ, ನೋಂದಣಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ.

**ಕಟ್ಟುನಿಟ್ಟಾದ ಕಾಲಮಿತಿ:-** ಸಂಸ್ಥೆಗಳು ತಾವು ಸ್ವೀಕರಿಸುವ ವಿದೇಶಿ ಹಣವನ್ನು ಎಷ್ಟು ಬೇಗನೆ ಬಳಸಿಕೊಳ್ಳಬೇಕು ಎಂಬುದಕ್ಕೆ ಈ ಮಸೂದೆಯು ನಿಗದಿತ ಕಾಲಮಿತಿಗಳನ್ನು ನಿಗದಿಪಡಿಸುತ್ತದೆ.

### 04 ತನಿಖೆ ಮತ್ತು ದಂಡನೆಗಳ ಕುರಿತಾದ ಬದಲಾವಣೆಗಳು

**ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು ಪಡೆಯುವುದು ಕಡ್ಡಾಯವಾಗಿದೆ:** FCRA ಸಂಬಂಧಿತ ದೂರಿನ ಮೇಲೆ ತನಿಖೆಯನ್ನು ಪ್ರಾರಂಭಿಸುವ ಮೊದಲು **ಸ್ಥಳೀಯ ಪೊಲೀಸ್ ಅಥವಾ ರಾಜ್ಯ ತನಿಖಾ ಸಂಸ್ಥೆಗಳು** ಕಡ್ಡಾಯವಾಗಿ ಪಾಲಿಸಬೇಕು.

**ಜೈಲು ಶಿಕ್ಷೆಯನ್ನು 5 ವರ್ಷಗಳಿಂದ 1 ವರ್ಷಕ್ಕೆ ಇಳಿಕೆ:** FCRA ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ, ದಂಡದ ನಿಯಮಗಳು ಮುಂದುವರಿಯಲಿದ್ದು, ನೀಡಲಾಗುವ ಗರಿಷ್ಠ ಜೈಲು ಶಿಕ್ಷೆಯನ್ನು ಇಳಿಸಲಾಗಿದೆ.

